ಈ ಡಬ್ಬ ಮೊಬೈಲ್ ಇಟ್ಗಂಡು ಸಾಹಿತಿ ಆಗ್ಬೇಕು ಅಂತಿದೀರಲ್ಲ. ನಾಳೆ ನಿಮ್ಗೆ ಒಂದೊಳ್ಳೆ ಲೇಟೆಸ್ಟ್ ಮೊಬೈಲ್ ಕೊಡುಸ್ತೀನಿ. ಆ ಮೇಲೆ ನೋಡುವಿರಂತೆ ಅದರ ಖದರ್ರು. ಈಗ ಹೊರಡಿ ನಾಳೆ ಸಂಜೆ ಎಟಿಎಂ ಕಾರ್ಡ್ ತಗಂಡು ಸರ್ಕಲ್‌ನಲ್ಲಿ ಇರೋ ಮೊಬೈಲ್ ಅಂಗಡಿ ಹತ್ರ ಬರೋಗಿ' ಎಂದ.

ಮರುದಿನ ಸಂಜೆ ಹದಿನೈದು ಸಾವಿರ ಕೊಟ್ಟು ಒಂದು ಹೊಸಾ ಮೊಬೈಲ್ ಕೊಂಡುಕೊಂಡದ್ದಾಯಿತು. ಅದು ಏಕೆ ಎಂಬುದು ಆಗಲೂ ಹುಚ್ಚೇಗೌಡನಿಗೆ ಅರ್ಥವಾಗಲಿಲ್ಲ. ಅವನು ಸುಮ್ಮನೆ ಮೊಬೈಲ್ ಸೆಟ್ಟನ್ನೇ ನೋಡುತ್ತಾ ನಿಂತಿದ್ದು ಕಂಡ ವರದರಾಜ, 'ಬನ್ನಿ ಇನ್ನೇನು ನೀವು ಸಾಹಿತಿ ಆದ ಹಂಗೇಯಾ. 'ನಕ್ಷತ್ರ'ದಲ್ಲಿ ಕೂತ್ಗಂಡು ಎಲ್ಲ ಡಿಟೈಲಾಗಿ ಹೇಳ್ತೀನಿ' ಎಂದು ಮುಂದೆ ಹೆಜ್ಜೆ ಹಾಕತೊಡಗಿದ.

'ಈ ಪುಟ್ಟ ಯಂತ್ರದಲ್ಲಿ ಇಡೀ ಬ್ರಹ್ಮಾಂಡವೇ ಅಡಗಿದೆ ಗೌಡ್ರೆ. ಇದರ ಉಪಯೋಗ ಪಡಕೊಂಡು ಯಾವ ವ್ಯಕ್ತಿಯೂ ಏನು ಬೇಕಾದರೂ ಆಗಬಹುದು' ಎಂದು ಶುರುಮಾಡಿದ ವರದರಾಜ ವಾಟ್ಸಪ್ಪು, ಫೇಸ್ಬುಕ್ಕು ಯೂಟ್ಯೂಬು ಎಂದು ತನಗೆ ಗೊತ್ತಿದ್ದ ಜ್ಞಾನದಲ್ಲಿ ಏನೇನೋ ಸಲಹೆ ನೀಡಿದ. ಹುಚ್ಚೇಗೌಡ ಏನೂ ಅರ್ಥವಾಗದೆ ಮಂಕು ಬಡಿದವನಂತೆ ಕೂತಿದ್ದು ಕಂಡ ವರದರಾಜ. 'ಇದನ್ನು ತಗಂಡು ಹೋಗಿ ನಿಮ್ಮ ಮೊಮ್ಮಗನ ಕೈಲಿಕೊಡಿ. ಅವನೇ ಎಲ್ಲಾ ಹೇಳಿಕೊಡ್ತಾನೆ' ಎಂದು ಕಳಿಸಿಕೊಟ್ಟ.

ಆರನೇ ತರಗತಿ ಓದುವ ಪುಟ್ಟ ಹುಡುಗ ಇದರ ಬಗ್ಗೆ ಏನು ಹೇಳಿಕೊಡಬಲ್ಲ ಎಂದು ಅಚ್ಚರಿಪಡುತ್ತಲೇ ಮನೆಗೆ ಬಂದ ಹುಚ್ಚೇಗೌಡ ಸೆಟ್ಟನ್ನು ಮೊಮ್ಮಗನ ಕೈಗೆ ಕೊಟ್ಟ.

ಕೈಗೆ ತೆಗೆದುಕೊಂಡ ಕೂಡಲೇ ಮೊಬೈಲನ್ನು ಅತ್ತಇತ್ತ ತಿರುಗಿಸಿ ನೋಡಿದ ಸಾತ್ವಿಕ್, ಕಂಪನಿಯ ಹೆಸರು, ಎಷ್ಟು ಜಿಬಿ, ಯಾವ ತರ ಕ್ಯಾಮೆರಾ ಎಂದು ಎಲ್ಲವನ್ನು ಪಟಪಟನೆ ಹೇಳುತ್ತಾ, 'ನಮ್ಮ ಮಮ್ಮಿಗಿಂತ ಒಳ್ಳೆ ಸೆಟ್ಟನ್ನೇ ತಗಂಡಿದೀಯ ತಾತ' ಎಂದ. ಹುಚ್ಚೇಗೌಡನಿಗೆ ಅಚ್ಚರಿಯಾಯಿತು.

ವಾಟ್ಸ್‌ಆಪ್, ಫೇಸ್ಬುಕ್ ಅಕೌಂಟ್ ಎಲ್ಲಾ ಮದನ್ ಕುಮಾರ್ ಹೆಸರಿನಲ್ಲಿ ಓಪನ್ ಮಾಡಿ 'ನೀನು ಈಗ ಈ ಮುಖಾಂತರ ಯಾರ ಯಾರ ಸಂಪರ್ಕ ಬೇಕಾದ್ರೂ ಬೆಳೆಸಬಹುದು. ಇಲ್ಲಿ ನೋಡು ಈ ಕೀಬೋರ್ಡು ಇದರಲ್ಲಿ ನಿನಗೆ ಬೇಕಾದದ್ದು ಏನು ಬೇಕಾದ್ರೂ ಟೈಪ್ ಮಾಡಿ ಫ್ರೆಂಡ್ಸಿಗೆ ಕಳಿಸಬಹುದು. ಹಾಳೆ ಇಟ್ಗಂಡು ಬರಿತಾ ಕೂರಂಗೇ ಇರದಿಲ್ಲ' ಎಂದು ಪಟಪಟನೆ ಹೇಳಿದ ಆ ಹುಡುಗ ನಂತರದಲ್ಲಿ ಫ್ರೆಂಡ್ ರಿಕ್ವೆಸ್ಟ್ ಕಳಿಸುವುದು. ಯಾವುದಾದರೂ ರಿಕ್ವೆಸ್ಟ್ ಬಂದರೆ ಸ್ವೀಕರಿಸುವುದು ಎಲ್ಲಾ ಹೇಳಿಕೊಟ್ಟ ಅವನು ಕೊನೆಯಲ್ಲಿ 'ಪೇಟಿಎಂ' ಆ್ಯಪ್ ಅನ್ನೂ ಹಾಕಿಕೊಟ್ಟು, 'ನೀನು ಇನ್ನು ಬ್ಯಾಂಕಿಗೆ, ಏಟಿಎಂಗೆ ಹೋಗಂಗೇ ಇಲ್ಲ. ದುಡ್ಡು ಕೊಡದು, ತಗಳದೂ ಎಲ್ಲ ಇದರಲ್ಲೇ ಮಾಡಬಹುದು' ಎಂದಾಗ ಆ ಪುಟ್ಟ ಹುಡುಗನ ಅಗಾಧ ಜ್ಞಾನದ ಬಗ್ಗೆ ಅಚ್ಚರಿಯಾಯಿತು.

ಕಾಲಕ್ರಮದಲ್ಲಿ ಅವನು ತನಗೆ ಅನಿಸಿದ್ದನ್ನು ಟೈಪ್ ಮಾಡಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡುವಂತೆ ಆದ. ಬರುಬರುತ್ತಾ ಅವನ ಫೇಸ್‌ಬುಕ್ ಬಳಗವೂ ಹೆಚ್ಚಾಗುತ್ತಾ ಇತ್ತು. ಮೊಮ್ಮಗನ ಸಲಹೆಯ ಮೇರೆಗೆ ಗೆಳೆಯರ ಫೋಟೋಗಳಿಗೆ, ಪೋಸ್ಟ್‌ಗಳಿಗೆಲ್ಲಾ ಹೊಗಳಿಕೆಯ ಕಾಮೆಂಟ್ ಮಾಡುವುದನ್ನು ರೂಢಿಸಿಕೊಂಡ.

ಅವನು ಆಗಾಗ ಹಾಕುತ್ತಿದ್ದ ಪೋಸ್ಟ್‌ಗಳಿಗೆ ಗೆಳೆಯರಿಂದ ಹೊಗಳಿಕೆಯ ಕಾಮೆಂಟ್ ಬಂದಾಗ ಉಬ್ಬಿ ಹೋಗುತ್ತಿದ್ದ.

ಈ ಮಧ್ಯೆ ವರದರಾಜನ ಸಲಹೆಯಂತೆ ಬಿಳಿ ಜುಬ್ಬಾ, ಪೈಜಾಮ ಧರಿಸಿ ನಗರದಲ್ಲಿ ನಡೆಯುವ ಸಾಹಿತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಬರತೊಡಗಿದ. ಹೊರಗಿನಿಂದ ಯಾರಾದರೂ ದೊಡ್ಡ ಸಾಹಿತಿಗಳು ಬಂದಿದ್ದರೆ ಅವರ ಪಕ್ಕ ನಿಂತು ಫೋಟೋ ಹೊಡೆಸಿಕೊಂಡು ಫೇಸ್‌ಬುಕ್ಕಿನಲ್ಲಿ ಹಾಕುವುದನ್ನು ಮರೆಯುತ್ತಿರಲಿಲ್ಲ.

ಯಾವ ಯಾವ ಸಾಹಿತಿ ಯಾವ ಯಾವ ರೀತಿ ವೇಷ ಧರಿಸುತ್ತಾರೆ, ಯಾವ ರೀತಿ ಗಡ್ಡ ಬಿಡುತ್ತಾರೆ ಎಂದು ಗಮನಿಸಿ ಅವನೂ ಅದನ್ನೇ ಅನುಸರಿಸುತ್ತಿದ್ದ. ಮನೆಯವರೂ ಅವನ ಬದಲಾವಣೆಯನ್ನು ಗಮನಿಸುತ್ತಿದ್ದರು.

ಒಂದು ದಿನ ಜುಬ್ಬದ ಮೇಲೆ ವಾಸ್ಕೋಟ್ ಧರಿಸಿ ತುಟಿಯ ಕೆಳಗೆ ಇಷ್ಟೇ ಇಟ್ಟು ಗಡ್ಡ ಉಳಿಸಿಕೊಂಡು